**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 01 ಬಿಯುಡಿ 2015

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:13-7-2015.

ತಿದ್ದುಪಡೆ

ವಿಷಯ: 2015-16ನೇ ಅರೆಕಾಲಿಕ ಉಪನ್ಯಾಸಕರು/ಅರೆಕುಶಲದಾಳು/ಅಕುಶಲದಾಳುಗಳಿಗೆ ಭತ್ಯೆಗಾಗಿ ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅನುದಾನ ಬಿಡುಗಡೆ ಬಗ್ಗೆ.

ಉಲ್ಲೇಖ: ಈ ಕಛೇರಿಯ ಅಧಿಕೃತ ಜ್ಞಾಪನ ಡಿಟಿಇ 01 ಬಿಯುಡಿ 2015 ದಿ:22-6-2015

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಅಧಿಕೃತ ಜ್ಞಾಪನದಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮತ್ತು ಸರ್ಕಾರಿ ಕಿರಿಯ ತಾಣತ್ರಿಕ ಶಾಲೆಗಳಲ್ಲಿ ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿನ ಖಾಲಿ ಹುದ್ದೆಗಳೆದುರು ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರು ಹಾಗೂ ಅರೆಕುಶಲದಾಳು/ಅಕುಶಲದಾಳುಗಳಿಗೆ 2012-13, 2013-14 ಹಾಗೂ 2014-15 ನೇ ಸಾಲಿಗೆ ವಿತರಿಸಬೇಕಾಗಿರುವ ಬಾಕಿ ಭತ್ಯೆಯನ್ನು ಕ್ರಮವಾಗಿ ಲೆಕ್ಕ ಶೀರ್ಷಿಕೆ 2203-00-105-0-01 (ಯೋಜನೇತರ) ಹಾಗೂ 2203-00-103-0-01 (ಯೋಜನೇತರ) ರಡಿಯಲ್ಲಿ ಭರಿಸಲು ಖಜಾನೆಗೆ ಬಿಲ್ಲನ್ನು ಸಲ್ಲಿಸಿ ಹಣ ಸೆಳೆಯಲು ಅನುಮತಿ ನೀಡಿ ಆದೇಶಿಸಲಾಗಿದೆ.

ಸದರಿ ಅಧಿಕೃತ ಜ್ಞಾಪನದ ಎರಡನೇ ಕಂಡಿಕೆ

"ಆದರೇ ಸದರಿ ಲೆಕ್ಕ ಶೀರ್ಷಿಕೆಗಳಲ್ಲಿ ಆಯವ್ಯಯದ ಕೊರತೆಯಿಂದಾಗಿ ಪೂರ್ಣ ಪ್ರಮಾಣದ ಅನುದಾನದವನ್ನು ಬಿಡುಗಡೆ ಮಾಡಲು ಸಾದ್ಯವಾಗುತ್ತಿಲ್ಲ. ಆದ್ದರಿಂದ ಪಾಠ ಪ್ರವಚನ ಸುಸೂತ್ರವಾಗಿ ಮುಂದುವರೆಯಲು ಹಾಗೂ ವಿಧ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2012-13, 2013-14 ಹಾಗೂ 2014-15 ನೇ ಸಾಲಿಗೆ ವಿತರಿಸಬೇಕಾಗಿರುವ ಬಾಕಿ ಭತ್ಯೆಯನ್ನು **2015-16 ನೇ ಸಾಲಿನ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಲೆಕ್ಕ ಶೀರ್ಷಿಕೆ 2203-00-105-0-01(ಯೋಜನೇತರ)ರಡಿಯಲ್ಲಿ ಭರಿಸಲು ಈ ಮೂಲಕ ಆದೇಶಿಸಲಾಗಿದೆ** ಅದೇ ರೀತಿ **ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಿಗೆ 2015-16 ನೇ ಸಾಲಿನ ಲೆಕ್ಕ ಶೀರ್ಷಿಕೆ 2203-00-103-0-01(ಯೋಜನೇತರ)ರಡಿಯಲ್ಲಿ ಭರಿಸಲು ಈ ಮೂಲಕ ಆದೇಶಿಸಲಾಗಿದೆ."** ನ್ನು

ಕೆಳಗಿನಂತೆ ಓದಿಕೊಳ್ಳತಕ್ಕದ್ದು.

" ಆದರೇ ಸದರಿ ಲೆಕ್ಕ ಶೀರ್ಷಿಕೆಗಳಲ್ಲಿ ಆಯವ್ಯಯದ ಕೊರತೆಯಿಂದಾಗಿ ಪೂರ್ಣ ಪ್ರಮಾಣದ ಅನುದಾನದವನ್ನು ಬಿಡುಗಡೆ ಮಾಡಲು ಸಾದ್ಯವಾಗುತ್ತಿಲ್ಲ. ಆದ್ದರಿಂದ ಪಾಠ ಪ್ರವಚನ ಸುಸೂತ್ರವಾಗಿ

ಮುಂದುವರೆಯಲು ಹಾಗೂ ವಿಧ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2012-13, 2013-14 ಹಾಗೂ 2014-15 ನೇ ಸಾಲಿಗೆ ವಿತರಿಸಬೇಕಾಗಿರುವ ಬಾಕಿ ಭತ್ಯೆಯನ್ನು **2015-16 ನೇ ಸಾಲಿನ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಲೆಕ್ಕ ಶೀರ್ಷಿಕೆ 2203-00-105-0-01(ಯೋಜನೇತರ)**ರಡಿಯಲ್ಲಿ **ಭರಿಸಿ ಸಿಟಿಎಸ್-1 ಬಿಲ್ಲಿನಲ್ಲಿ ಹಣ ಸೆಳೆಯಲು ಈ ಮೂಲಕ ಆದೇಶಿಸಲಾಗಿದೆ** ಅದೇ ರೀತಿ **ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಿಗೆ 2015-16 ನೇ ಸಾಲಿನ ಲೆಕ್ಕ ಶೀರ್ಷಿಕೆ 2203-00-103-0-01(ಯೋಜನೇತರ)**ರಡಿಯಲ್ಲಿ **ಭರಿಸಿ ಸಿಟಿಎಸ್-1 ಬಿಲ್ಲಿನಲ್ಲಿ ಹಣ ಸೆಳೆಯಲು ಈ ಮೂಲಕ ಆದೇಶಿಸಲಾಗಿದೆ. "**

ಉಳಿದಂತೆ ಈ ಕಛೇರಿಯ ಅಧಿಕೃತ ಜ್ಞಾಪನ ಡಿಟಿಇ 01 ಬಿಯುಡಿ 2015 ದಿ:22-6-2015 ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ನಿರ್ದೇಶಕರು

ಯೋಜನೇತರ ಅಡಿಯಲ್ಲಿನ ಪಾಲಿಟೆಕ್ನಿಕ್ ಮತ್ತು ಕಿರಿಯ ತಾಂತ್ರಿಕ ಶಾಲೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1.ಆಡಳಿತಾಧಿಕಾರಿಯವರು,ನಿರ್ದೇಶನಾಲಯ.

2.ರಿಜಿಸ್ಟ್ರಾರ್ (ಆಡಳಿತ),ನಿರ್ದೇಶನಾಲಯ.

3.ಇಎಸ್‌ಟಿ(2ಬಿ) ಹಾಗೂ ಎಂಎಸ್‌ಸಿ ವಿಭಾಗಗಳು,ನಿರ್ದೇಶನಾಲಯ.

4.ಜಿಲ್ಲಾ ಖಜಾನಾಧಿಕಾರಿಗಳು, ಮತ್ತು ತಾಲ್ಲೂಕು ಖಜಾನಾಧಿಕಾರಿಗಳು.